# ಗೂಗಲ್ ಮ್ಯಾಪ್ಸ್: ಬಳಕೆ ಇನ್ನಷ್ಟು ಸಲೀಸು

■ ಶಶಿಕುಮಾರ್ ಸಿ.




ಬಳಕೆದಾರರಿಗೆ ಒದಗಿಸುತ್ತಿರುವ ಸೌಲಭ್ಯದಲ್ಲಿ ಗಮನಾರ್ಹ ಬದಲಾವಣೆ ತಂದಿರುವ 'ಗೂಗಲ್ ಮ್ಯಾಪ್ಸ್', ಈಚೆಗೆ ಆರು ಫೀಚರ್‌ಗಳನ್ನು ಅಪ್‌ಡೇಟ್ ಮಾಡಿದೆ. ಆ ಮೂಲಕ ತಾನು ಒದಗಿಸುತ್ತಿರುವ ಸೇವೆಯ ಅನುಭವವನ್ನು ಸುಧಾರಿಸಲು ಮತ್ತು ಸುಲಲಿತ ಪ್ರಯಾಣಕ್ಕೆ ಅನುವು ಮಾಡಿಕೊಡಲು ಮುಂದಾಗಿದೆ.

ಆರ್ಟಿಫಿಷಿಯಲ್ ಇಂಟಲಿಜೆನ್ಸ್ (ಕೃತಕ ಬುದ್ಧಿಮತ್ತೆ) ಮತ್ತು ಸ್ಥಳೀಯ ಸಹಭಾಗಿತ್ವದ ಮೂಲಕ ಹೊಸ ಫೀಚರ್‌ಗಳನ್ನು ಪರಿಚಯಿಸಿರುವ ಗೂಗಲ್ ಮ್ಯಾಪ್ಸ್, ಪ್ರಯಾಣದ ವೇಳೆ ಪ್ರಯಾಣಿಕರಿಗೆ ಎದುರಾಗುವ ಸವಾಲುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅದಕ್ಕೆ ಅನುಕೂಲಕರವಾದ ಅಪ್‌ಡೇಟ್ಸ್ ಮಾಡಿದೆ.

ಸಂಚಾರ ದಟ್ಟಣೆ ಸಮಸ್ಯೆಯು ಹೆಮ್ಮರವಾಗಿರುವ ಬೆಂಗಳೂರಿನಂತಹ ನಗರಗಳಲ್ಲಿ ನಾಲ್ಕು ಚಕ್ರ ವಾಹನಗಳಿಗೆ ಸೂಕ್ತವಲ್ಲದ ರಸ್ತೆಗಳಲ್ಲಿ ಪ್ರಯಾಣಿಸುವುದರ ಬಗ್ಗೆ ಎಚ್ಚರಿಸುವುದು ಮತ್ತು ಕಿರಿದಾದ ರಸ್ತೆಗಳನ್ನು ಗುರ್ತಿಸಿ ಸಂದೇಶ ನೀಡಲು ಗೂಗಲ್ ಮ್ಯಾಪ್ಸ್ ಕೃತಕ ಬುದ್ಧಿಮತ್ತೆ ಅವಲಂಬಿಸಲಿದೆ. ಸಂಚಾರ ದಟ್ಟಣೆ ಹಾಗೂ ರಸ್ತೆಯ ಪರಿಸ್ಥಿತಿ ಅವಲೋಕಿಸಲು ಉಪಗ್ರಹ ಚಿತ್ರಣ, ಗಲ್ಲಿ ವೀಕ್ಷಣೆ ಡೇಟಾವನ್ನು ಅಲ್ಗದರಿದಂ ಮೂಲಕ ಬಳಸಿಕೊಳ್ಳಲಾಗುತ್ತಿದೆ.

ಸದ್ಯ ಈ ಫೀಚರ್‌ಗಳು ಹೈದರಾಬಾದ್, ಬೆಂಗಳೂರು ಮತ್ತು ಚೆನ್ನೈ ಸೇರಿದಂತೆ ದೇಶದ ಪ್ರಮುಖ ನಗರಗಳಲ್ಲಿ ಲಭ್ಯವಾಗಲಿದೆ. ಆರು ಫೀಚರ್‌ಗಳ ಮಾಹಿತಿ ಇಲ್ಲಿದೆ.

## ಫ್ಲೈಓವರ್ ನ್ಯಾವಿಗೇಷನ್

ಗೂಗಲ್ ಮ್ಯಾಪ್ಸ್ ಈಗ ಭಾರತದ 40 ಪ್ರಮುಖ ನಗರಗಳಲ್ಲಿನ ಪ್ರಮುಖ ಫ್ಲೈಓವರ್‌ಗಳನ್ನು (ಮೇಲ್ಸೇತುವೆ) ಪ್ರಯಾಣದ ವೇಳೆ ಹೈಲೈಟ್ ಮಾಡುತ್ತದೆ. ಹೈಲೆಟ್ ಮಾಡಿದ ಮೇಲ್ಸೇತುವೆಗಳಲ್ಲಿ ಸರಾಗವಾಗಿ ಸಂಚರಿಸಲು ಚಾಲಕರಿಗೆ ನೆರವಾಗುತ್ತದೆ. ಅಲ್ಲದೆ ಆಯಾ ಮಾರ್ಗಗಳಲ್ಲಿನ 'ರಿಯಲ್ ಟೈಮ್' ಪರಿಸ್ಥಿತಿಯ ಬಗ್ಗೆಯೂ ಅಪ್‌ಡೇಟ್ ಮಾಡುತ್ತದೆ. ಮೇಲ್ಸೇತುವೆ ಮೇಲೆ ಸಂಚರಿಸುವ ಅಥವಾ ಸಂಚರಿಸದೆ ಇರುವ ಬಗ್ಗೆ ನಿಖರ ಮಾಹಿತಿಯನ್ನು ಒದಗಿಸುತ್ತದೆ.

## ಮೆಟ್ರೊ ಟಿಕೆಟ್ ಬುಕಿಂಗ್‌ಗೆ ನೆರವು

ಹೊಸ ಫೀಚರ್ ಕೇರಳದ ಕೊಚ್ಚಿ ಹಾಗೂ ತಮಿಳುನಾಡಿನ ಚೆನ್ನೈನಲ್ಲಿ ಮೆಟ್ರೊಗಳಲ್ಲಿ ಸಂಚರಿಸಲು ಟಿಕೆಟ್ ಬುಕ್ಕಿಂಗ್‌ಗೆ ನೆರವಾಗುತ್ತದೆ. ಚಾಲನೆ ವೇಳೆಯೇ ಸ್ಥಳೀಯ ಮೆಟ್ರೊ ನಿಲ್ದಾಣಗಳ ಬಗ್ಗೆ ನೋಟಿಫಿಕೇಷನ್ ಕಳುಹಿಸುವ ಗೂಗಲ್ ಮ್ಯಾಪ್ಸ್, ಟಿಕೆಟ್ ಬುಕ್ಕಿಂಗ್ ಸಹಾಯದ ಬಗ್ಗೆ ತಿಳಿಸುತ್ತದೆ. ಗೂಗಲ್ ಮ್ಯಾಪ್ಸ್, ಒಎನ್‌ಡಿಸಿ ಮತ್ತು ನಮ್ಮ ಯಾತ್ರಿ ಜೊತೆಗಿನ ಏಕೀಕರಣದ ಮೂಲಕ ಮೆಟ್ರೊ ಟಿಕೆಟ್‌ಗಳನ್ನು ಬುಕ್ ಮಾಡಲು ಸಹಕರಿಸುತ್ತದೆ. ಈ ಸೇವೆಯನ್ನು ಬೆಂಗಳೂರು, ದೆಹಲಿ ಹಾಗೂ ಕೋಲ್ಕತ್ತ ಮೆಟ್ರೊಗಳಿಗೂ ಶೀಘ್ರವೇ ಕಂಪನಿಯು ವಿಸ್ತರಿಸಲಿದೆ.

## ಚಾರ್ಜಿಂಗ್ ಸ್ಟೇಷನ್ ಇಂಟಿಗ್ರೇಷನ್

ಎಲ್ಲೆಡೆ ಎಲೆಕ್ಟ್ರಿಕ್ ವಾಹನಗಳ ಕ್ರೇಜ್ ಹೆಚ್ಚುತ್ತಿದ್ದು, ಅದಕ್ಕೆ ತಕ್ಕಂತೆ ಗೂಗಲ್ ಮ್ಯಾಪ್ಸ್ ಸಹ ತನ್ನ ಪ್ಲಾಟ್‌ಫಾರ್ಮ್‌ನಲ್ಲಿ ಎಲ್ಲೆಲ್ಲಿ ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್‌ಗಳು ಇವೆ ಎಂಬುದರ ಬಗ್ಗೆ ಮಾಹಿತಿ ನೀಡುತ್ತದೆ. ಈಗಲೂ ಈ ಸೌಲಭ್ಯವಿದ್ದು, ನಿರ್ದಿಷ್ಟವಾಗಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಹುಡುಕಿದಾಗ ಮಾತ್ರ ಮಾಹಿತಿ ಲಭ್ಯವಾಗುತ್ತದೆ. ಆದರೆ ಹೊಸ ಫೀಚರ್‌ನಲ್ಲಿ ಬಳಕೆದಾರರು ತಮ್ಮ ಎಲೆಕ್ಟ್ರಿಕ್ ವಾಹನದ ಬಗ್ಗೆ ನಮೂದಿಸಿದ್ದರೆ ತಾನಾಗಿಯೇ ವಾಹನ ಸಂಚರಿಸುವ ಸುತ್ತಮುತ್ತಲಿನಲ್ಲಿ ಲಭ್ಯವಿರುವ ಚಾರ್ಜಿಂಗ್ ಸ್ಟೇಷನ್‌ಗಳ ಬಗ್ಗೆ ಅಲರ್ಟ್ ನೀಡುತ್ತದೆ.

ಅಲ್ಲದೆ, 8,000ಕ್ಕೂ ಹೆಚ್ಚು ಚಾರ್ಜಿಂಗ್ ಸ್ಟೇಷನ್‌ಗಳ ವಿವರಗಳನ್ನು ಸಂಯೋಜಿಸಲು ಗೂಗಲ್ ಮ್ಯಾಪ್ಸ್, ಇವಿ ಚಾರ್ಜಿಂಗ್ ಪೂರೈಕೆದಾರರೊಂದಿಗೆ ಸಹಭಾಗಿತ್ವ ಮಾಡಿಕೊಂಡಿದೆ. ಇದು ನೈಜ ಸಮಯದ ಲಭ್ಯತೆ ಮತ್ತು ಚಾರ್ಜರ್ ಪ್ರಕಾರದ ಮೂಲಕ ಫಿಲ್ಟರಿಂಗ್ ಒಳಗೊಂಡಿರುತ್ತದೆ. ಜೊತೆಗೆ ಗೂಗಲ್ ಮ್ಯಾಪ್ಸ್, ದ್ವಿಚಕ್ರ ವಾಹನ ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಒಳಗೊಂಡ ಮೊದಲ ದೇಶವಾಗಿ ಭಾರತವನ್ನು ಮಾರ್ಪಾಡಿಸಿದೆ.

## ಪ್ರಮುಖ ಸ್ಥಳಗಳ ಅಲರ್ಟ್

ಪ್ರಮುಖ ನಗರಗಳು ಮತ್ತು ಪ್ರವಾಸಿ ತಾಣಗಳಲ್ಲಿ ಶಿಫಾರಸು ಮಾಡಲಾದ ಸ್ಥಳಗಳ ಪಟ್ಟಿಗಳನ್ನು ಸಂಗ್ರಹಿಸಲು ಸ್ಥಳೀಯ ತಜ್ಞರು ಗೂಗಲ್‌ನೊಂದಿಗೆ ಸಹಕರಿಸುತ್ತಿದ್ದಾರೆ. ಈ ಮೂಲಕ ಸಂಚಾರದ ವೇಳೆ ಗೂಗಲ್ ಮ್ಯಾಪ್ಸ್ ತಾನಾಗಿಯೇ ಸುತ್ತಮುತ್ತಲ ಸ್ಥಳದ ಪ್ರಮುಖ ತಾಣಗಳ ಬಗ್ಗೆ ಅಲರ್ಟ್ ಒದಗಿಸುತ್ತದೆ.



## ಸುಧಾರಿತ ರಸ್ತೆ ಮಾಹಿತಿ

ಆ್ಯಂಡ್ರಾಯ್ಡ್, ಐಒಎಸ್, ಆ್ಯಂಡ್ರಾಯ್ಡ್ ಆಟೊ, ಆ್ಯಪಲ್ ಕಾರ್ ಪ್ಲೇನಲ್ಲಿ ಲಭ್ಯವಾಗಲಿರುವ ರಸ್ತೆಗಳ ನೈಜ ಚಿತ್ರಣದ ವಿವರಗಳನ್ನು ಬಳಕೆದಾರರಿಗೆ ವರದಿ ಮಾಡುವುದರ ಜೊತೆಗೆ, ಸ್ಥಳೀಯ ಸಾರಿಗೆ ಸವಾಲುಗಳನ್ನು ಪರಿಹರಿಸಲು ಈ ಫೀಚರ್ ಕಾರ್ಯನಿರ್ವಹಿಸಲಿದೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್ ಸಾಧನಗಳಲ್ಲಿ ಇದು ಕ್ರಮೇಣ ಲಭ್ಯವಾಗಲಿದೆ. ■